

ಭಂಡಾರಿಯ ಫೋನ್ ಬಂತು. 'ರಾಜೀವ್ ನನ್ನ ಡ್ಯೂಟಿ ಮುಗೀತು. ನಾನು ನಿದ್ದೆ ಮಾಡಿ ಎರಡು ದಿನ ಆದ್ವು. ನಮ್ಮ ಲಿಮಿಟ್ಸ್‌ನಲ್ಲೇ ಯಾವುದಾದ್ರೂ ಲಾಡ್ಜ್‌ನಲ್ಲಿ ರೂಮು ತಗಂಡು ಮಲಗಿಬಿಡೋಣ ಅಂತಿದ್ದೀನಿ. ರಾನಡೆ ಬಾಡಿ ತಗಂಡು ಹೋಗೋಕೆ ಇನ್ನೂ ಯಾರೂ ಬಂದಿಲ್ಲವಂತೆ. ನಾನೀಗ ಈಗ ಕಬ್ಬನ್‌ಪಾರ್ಕ್ ಸ್ಟೇಷನ್ನಿನಿಂದ ಹೊರಟಿದ್ದೀನಿ. ನಿನ್ನ ಕೆಲಸ ಮುಗಿದಿದ್ದರೆ ಹೇಳು, ನಾನೇ ಮನೆಗೆ ಡ್ರಾಪ್ ಮಾಡಿಸ್ತೀನಿ...' ಎಂದು ಭಂಡಾರಿ ಹೇಳಿದರು.

ಟೌನ್‌ಹಾಲ್ ಹತ್ತಿರ ಬರುತ್ತಿರುವಾಗ 'ನೋಡಯ್ಯಾ, ಇದು ನನ್ನ ಸ್ಟೇಷನ್ನಿನ ಲಿಮಿಟ್ಸ್‌ಗೆ ಬರುವ ಲಿಕ್ಕರ್ ಸೇಲ್ಸ್ ಅಂಡ್ ಸರ್ವೀಸ್ ಪಾಯಿಂಟ್. ಯಾರೋ ಮಂತ್ರಿಯ ಸಂಬಂಧಿಕನದಂತೆ. ಇದರ ತಂಟೆಗೆ ಹೋಗಬೇಡಿ ಅಂತ ನಂಗೆ ಚಾರ್ಜ್ ವಹಿಸಿಕೊಟ್ಟ ಇನ್‌ಸ್ಪೆಕ್ಟರ್ ಹೇಳಿದ. ರಾತ್ರಿ ಮೂರು ಗಂಟೆ ತನಕ ಓಪನ್ ಆಗಿರುತ್ತಂತೆ! ಇದನ್ನು ಮುಚ್ಚಿಸೋ ಧೈರ್ಯ ನಮ್ಮ ಕಮಿಷನರ್‌ಗೂ ಇಲ್ಲವಂತೆ! ನಮ್ಮ ಲಿಮಿಟ್ಸ್‌ನಲ್ಲಿ ನಡೆಯೋ ಕ್ರೈಮ್‌ಗಳ ಕ್ಲೂ ಸಿಗೋದು ಇಲ್ಲೇ ಅಂತೆ. ನಿನಗೆ ಅಭ್ಯಂತರ ಇಲ್ಲದಿದ್ರೆ ಮೊದಲು ಸ್ಟೇಷನ್ನಿಗೆ ಹೋಗೋಣ. ನಾನು ಯೂನಿಫಾರಂ ಬದಲಾಯಿಸಿದ ಮೇಲೆ ಮತ್ತೆ ಇಲ್ಲಿಗೆ ಬರೋಣ. ಇಲ್ಲಿ ಸ್ವಲ್ಪ ಹೊತ್ತು ಕೂತು ಮಾತಾಡಬಹುದು. ನಮಗೆ ಬೇಕಾದ ವ್ಯಕ್ತಿಯೊಬ್ಬ ಇಲ್ಲಿಗೆ ಬರ್ತಾನೆ ಅನ್ನೋ ಮಾಹಿತಿ ಇದೆ' ಎಂದು ಹೇಳಿ, 'ಇಲ್ಲೆಲ್ಲೋ ಒಂದು ಸಾವಜಿ ಖಾನಾವಳಿ ಇದೆಯಂತೆ. ಅಲ್ಲಿ ಚಿಕನ್ ಐಟಂಗಳು ಚೆನ್ನಾಗಿರ್ತವೆ ಅಂತ ನಮ್ಮ ಪೀಸಿಗಳು ಹೇಳ್ತಾರೆ' ಎಂದು ಭಂಡಾರಿ ಹೇಳಿದರು.

ಅಷ್ಟರಲ್ಲಿ ಭಂಡಾರಿ ಫೋನ್ ರಿಂಗಾಯಿತು. ಜೀಪು ನಿಲ್ಲಿಸಿ ಮಾತಾಡಿ ಮುಗಿಸಿದ ಭಂಡಾರಿ, ರಾಜೀವನ ಮುಖ ನೋಡುತ್ತಾ ಸುಹಾಸನ ಬಾಡಿ ತಗಂಡು ಹೋಗ್ತೀವಿ ಅಂತ ರಾಯಭಾಗದಿಂದ ಹತ್ತನ್ನೆರಡು ಜನ ಬಂದಿದ್ದಾರಂತೆ! ಯಾರ ಹತ್ರಾನೂ ಸರಿಯಾದ ಡಾಕ್ಯುಮೆಂಟ್ಸ್ ಇಲ್ಲವಂತೆ! ನಾವು ಸುಹಾಸನ ಸಂಬಂಧಿಕರು ಅಂತ ಎರಡೂ ಕಡೆಯವರು ಹೇಳ್ತಿದ್ದಾರಂತೆ. ಮುಖ ನೋಡಿದರೆ ಅವರು ಸಂಬಂಧಿಕರಲ್ಲ ಅನ್ಸುತ್ತೆ. ಅವರಿಗೆ ಬಾಡಿ ಕೊಡೋಕಾಗಲ್ಲ. ನಾನು ಪ್ರೊಬೇಷನರಿ